ಬೆಳಗಾವಿ ಜಿಲ್ಲೆಯ ಜಿಲ್ಲಾ ಮುಖ್ಯ ರಸ್ತೆಗಳನ್ನು ರಾಜ್ಯ ಹೆದ್ದಾರಿ ರಸ್ತೆಗಳನ್ನಾಗಿ ಪರಿವರ್ತಿಸುವುದು.

649 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಳಗಾವಿ ಜಿಲ್ಲೆಯ ಜಿಲ್ಲಾ ಮುಖ್ಯ ರಸ್ತೆಗಳಾದ 1) ಬೈಲಹೊಂಗಲ-ಸವದತ್ತಿ ವಾಯಾ ಉಡಕೇರಿ ರಸ್ತೆ 2) ಬೈಲಹೊಂಗಲ-ಸವದತ್ತಿ ವಾಯಾ ಮುನವಳ್ಳಿ ರಸ್ತೆ (3) ಬೈಲಹೊಂಗಲ-ಧಾರವಾಡ ವಾಯಾ ದೊಡವಾಡ ರಸ್ತೆ (4) ಬೈಲಹೊಂಗಲ-ಧಾರವಾಡ ವಾಯಾ ಬುಡರಕಟ್ಟಿ ರಸ್ತೆ ಈ ರಸ್ತೆಗಳು ರಾಷ್ಟ್ರೀಯ ಹೆದ್ದಾರಿಗೆ ಕೊಡುವ ರಸ್ತೆಗಳಾಗಿದ್ದು ಹಾಗೂ ಮಲಪ್ರಭಾ ಹಾಗೂ ಘಟ್ಟಪ್ರಭಾ ಸಕ್ಕರೆ ಕಮಾಂಡ್ ವಿರಿಯಾದಲ್ಲಿ ಬರುವ ರಸ್ತೆಗಳಿಂದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ರಸ್ತೆಗಳು ಶ್ರೀ ಕ್ಷೇತ್ರ ಸೊಗಲ ಹಾಗೂ ಎಲ್ಲಮ್ಮನ ಗುಡ್ಡಕ್ಕೆ ಹೋಗುವ ಮುಖ್ಯ ರಸ್ತೆಗಳಾಗಿದ್ದು ಶ್ರೀ ಕ್ಷೇತ್ರ ಸೊಗಲವು ಹಾಗೂ ಎಲ್ಲಮ್ಮನ ಗುಡ್ಡವು ಪ್ರವಾಸಿಕರ ಹಾಗೂ ಯಾತ್ರಿಕರ ಸ್ಥಳವಾದ ಸಂಗತಿ ನಿಜವೇ?*

ಇ) *ಹಾಗಿದ್ದಲ್ಲಿ ಈ ರಸ್ತೆಗಳನ್ನು ರಾಜ್ಯ ಹೆದ್ದಾರಿ ರಸ್ತೆಗಳನ್ನಾಗಿ ಮಾಡಲು ಸರ್ಕಾರದವರು ಕೈಕೊಂಡ ಕ್ರಮಗಳೇನು?*

ಶ್ರೀ ಕೆ.ಹೆಚ್. ರಂಗನಾಥ (ಲೋಕೋಪಯೋಗಿ ಸಚಿವರು) :

ಅ) ಸದರಿ ರಸ್ತೆಗಳ ಪೈಕಿ ಬೈಲಹೊಂಗಲ ಧಾರವಾಡ ವಯಾ ಬುಡಕಟ್ಟಿ ರಸ್ತೆಯು ಮಾತ್ರ ರಾಷ್ಟ್ರೀಯ ಹೆದ್ದಾರಿಯನ್ನು ಕೂಡುತ್ತದೆ. ಹಾಗೂ ಸದರಿ ರಸ್ತೆಗಳು ಸಕ್ಕರೆ ಕಾರ್ಖಾನೆಗಳ ಕಬ್ಬು ಪೂರೈಕೆಯ ಮುಖ್ಯ ಕ್ಷೇತ್ರದ ಹೊರಗಿದೆ.

ಆ) ನಿಜ

ಇ) ಬೈಲಹೊಂಗಲ ಸವದತ್ತಿ ವಯಾ ಉಡಕೇರಿ ರಸ್ತೆ ಹಾಗೂ ಬೈಲಹೊಂಗಲ ಧಾರವಾಡ ವಾಯಾ ಬುಡರಕಟ್ಟಿ ರಸ್ತೆಗಳನ್ನು ರಾಜ್ಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಲು ಪ್ರಸ್ತಾಪವು ಇದ್ದು ಸರ್ಕಾರದ ಪರಿಶೀಲನೆಯಲ್ಲಿದೆ. ಉಳಿದ ರಸ್ತೆಗಳನ್ನು ರಾಜ್ಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಲು ಪ್ರಸ್ತಾಪ ಇರುವುದಿಲ್ಲ.

ಸಂವಿಧಾನದ ಪ್ರಕಾರ ವಿಧಾನ ಪರಿಷತ್ತಿಗೆ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳ ಚುನಾವಣೆ

232 - ಶ್ರೀ ಆರ್. ದಯಾನಂದ ರಾವ್ (ಗಾಂಧಿನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳ ಸಂಖ್ಯೆ ಎಷ್ಟು?*

ಆ) *ಈ ಸದಸ್ಯರುಗಳು ಯಾವ ದಿನಾಂಕದಂದು ಚುನಾಯಿತಗೊಂಡರು ಹಾಗೂ ಯಾವ ದಿನಾಂಕದಿಂದ ನಿವೃತ್ತರಾಗಲಿರುವರು?*

ಇ) *ಸಂವಿಧಾನ ಪ್ರಕಾರ ಪ್ರತಿ ಎರಡು ವರ್ಷಕ್ಕೆ ಒಮ್ಮೆ ಈ ಚುನಾವಣೆಗಳು ನಡೆಯಬೇಕೆಂಬುದು ನಿಜವಲ್ಲವೇ?*

ಈ) *ಸ್ಥಳೀಯ ಸಂಸ್ಥೆಗಳಿಂದ ಚುನಾಯಿತಗೊಂಡ ಎಲ್ಲಾ ಸದಸ್ಯರೂ ಒಟ್ಟಿಗೆ ಒಂದೇ ವೇಳೆಗೆ ಆರು ವರ್ಷ ಮುಗಿಸಿ ನಿವೃತ್ತರಾಗುವ ಪದ್ಧತಿಯನ್ನು ತಪ್ಪಿಸಿ ಸಂವಿಧಾನದ ಪ್ರಕಾರ ಪ್ರತಿ ಎರಡು ವರ್ಷಕ್ಕೊಮ್ಮೆ ಚುನಾವಣೆ ನಡೆಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?*